## ₹ 75 ದಿನಭತ್ಯೆ ಸಿಗುತ್ತಿತ್ತು!

1991–92ರಲ್ಲಿ ಜೂನಿಯರ್ ಕರ್ನಾಟಕ ತಂಡಕ್ಕೆ ಆಯ್ಕೆಯಾಗಿ ಇಲ್ಲಿ ಪಂದ್ಯ ಆಡಲು ಬಂದಿದ್ದೆ. ಆದರೆ, ಆಗ ಅಂತಿಮ ಹನ್ನೊಂದರಲ್ಲಿ ಆಡುವ ಅವಕಾಶ ಸಿಕ್ಕಿರಲಿಲ್ಲ. ಆಗ ನಮಗೆ ದಿನಭತ್ಯೆ ₹ 75 ನೀಡುತ್ತಿದ್ದರು. ರೈಲಿನಲ್ಲಿ ಮೂರು ದಿನ ಪ್ರಯಾಣ ಮಾಡಿ ಬರಬೇಕಿತ್ತು. ಈಗ ಸ್ಥಿತಿ ಬಹಳಷ್ಟು ಬದಲಾಗಿದೆ. ಜೂನಿಯರ್ ಮತ್ತು ಸೀನಿಯರ್ ತಂಡಗಳಿಗೆ ಉತ್ತಮ ಸೌಲಭ್ಯಗಳು ಸಿಗುತ್ತಿವೆ. ರಾಜ್ಯ ತಂಡಗಳಿಗೆ ಆಡುವ ಹುಡುಗರಿಗೆ ಉತ್ತಮ ಭತ್ಯೆಗಳು ಮತ್ತು ಪಂಚತಾರಾ ಹೋಟೆಲ್ ಸೌಲಭ್ಯ ಸಿಗುತ್ತಿರುವುದು ಒಳ್ಳೆಯದಾಗಿದೆ. ಆಟಗಾರರು ಉತ್ತಮವಾಗಿ ಆಡುವುದರಿಂದ ಆಟ ಬೆಳೆಯುತ್ತದೆ. ಆದಕ್ಕೆ ತಕ್ಕಂತೆ ಅವರೂ ಸೌಲಭ್ಯ ಪಡೆಯುತ್ತಾರೆ. ಅದರಲ್ಲೂ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಎಲ್ಲವನ್ನೂ ಪಾರದರ್ಶಕವಾಗಿ ನಿರ್ವಹಿಸಲಾಗುತ್ತಿದೆ.

**-ದೊಡ್ಡಗಣೇಶ್, ಹಿರಿಯ ಕ್ರಿಕೆಟಿಗ.**

ಮತ್ತು ಬಿಸಿಸಿಐ ಕಚೇರಿಯಲ್ಲಿ ಆಡಳಿತ ಹೊಸ ದಿಕ್ಕಿನಲ್ಲಿ ಹೆಜ್ಜೆ ಇರಿಸಲು ನೆರವಾಗಲಿದೆ ಎಂಬುದು ವಿಶ್ವಾಸ. 'ಬಿಸಿಸಿಐ ಕಚೇರಿ ಬೆಂಗಳೂರಿಗೆ ಸ್ಥಳಾಂತರ ಆಗುತ್ತಿದೆ ಎಂಬುದು ಹೆಮ್ಮೆಯ ವಿಷಯ. ಇಂಥ ನಿರ್ಧಾರ ಕೈಗೊಂಡಿದ್ದರಿಂದ ಸಂತಸವಾಗುತ್ತಿದೆ. ಬಿಸಿಸಿಐನಂಥ ಸಂಸ್ಥೆಯೊಂದರ ಕಚೇರಿಗೆ ಬೆಂಗಳೂರಿಗಿಂತ ಉತ್ತಮ ಸ್ಥಳ ಬೇರೊಂದಿಲ್ಲ ಎಂದೆನಿಸುತ್ತದೆ. ಇಲ್ಲಿಂದ ಪ್ರಪಂಚದ ಮೂಲೆಮೂಲೆಗೂ ವಾಯುಯಾನ ಸೌಲಭ್ಯವಿರುವುದರಿಂದ ಕ್ರಿಕೆಟ್‌ಗೆ ಸಂಬಂಧಪಟ್ಟ ಎಲ್ಲರ ಓಡಾಟಕ್ಕೂ ಅನುಕೂಲ ಆಗಲಿದೆ. 40 ಎಕರೆ ಜಾಗದಲ್ಲಿ ಸುಸಜ್ಜಿತ ಕಚೇರಿ ಮತ್ತು ಮೂಲಸೌಲಭ್ಯಗಳನ್ನು ಕಲ್ಪಿಸಬಹುದಾಗಿದೆ' ಎಂದು ಹಿರಿಯ ಕ್ರಿಕೆಟಿಗ ಬ್ರಿಜೇಶ್ ಪಟೇಲ್ ಹೇಳುತ್ತಾರೆ.

### ಉದ್ಯೋಗಾವಕಾಶ



ಐಪಿಎಲ್‌ನಲ್ಲಿ 11 ಕೋಟಿ ಪಡೆದ ಕೆ.ಎಲ್.ರಾಹುಲ್

ಕ್ರೀಡೆಗಳು ವೃತ್ತಿಪರವಾಗಿ ರೂಪುಗೊಳ್ಳಲು ಮತ್ತು ಜನರನ್ನು ಆಕರ್ಷಿಸಲು ಇನ್ನೊಂದು ಕಾರಣವೆಂದರೆ ಇದೇ ರಂಗದಲ್ಲಿ ಉದ್ಯೋಗವಕಾಶಗಳು ಹೆಚ್ಚುತ್ತಿರುವುದು. ಪ್ರತಿಯೊಂದು ಕ್ರೀಡೆಯಲ್ಲಿಯೂ ತಂತ್ರಜ್ಞಾನದ ಬಳಕೆ, ಟಿವಿ, ವೆಬ್ ಮಾಧ್ಯಮಗಳ ಚಟುವಟಿಕೆಗಳು ಹೆಚ್ಚುತ್ತಿವೆ. ಆದ್ದರಿಂದ ಯುವಕರ ದಂಡು ಇತ್ತ ಆಕರ್ಷಿತಗೊಳ್ಳುತ್ತಿದೆ. ಉದಾಹರಣೆಗೆ ಕ್ರಿಕೆಟ್ ಆಡಲು ಆರಂಭಿಸುವ ಎಲ್ಲ ಮಕ್ಕಳೂ ಭಾರತ ತಂಡಕ್ಕೆ ಆಡಲು ಸಾಧ್ಯವಾಗುವುದಿಲ್ಲ. ಅಷ್ಟೇ ಏಕೆ, ಕೆಲವರಿಗೆ ರಣಜಿ ತಂಡದಲ್ಲಿಯೂ ಆಡುವ ಅವಕಾಶ ಸಿಗುವುದಿಲ್ಲ. ಆದರೆ ಜೀವನಪೂರ್ತಿ ಕ್ರಿಕೆಟ್‌ನೊಂದಿಗೆ ನಂಟು ಉಳಿಸಿಕೊಳ್ಳುವ ಮಾರ್ಗಗಳು ಇವೆ. ತರಬೇತುದಾರರಾಗಿ, ಕಾಮೆಂಟೇಟರ್, ವಿಡಿಯೋ ಅ್ಯನಾಲಿಸ್ಟ್, ಅಂಪೈರ್, ರೆಫರಿ, ಫಿಸಿಯೊ, ಟ್ರೇನರ್ ರೂಪದಲ್ಲಿ ಕಾರ್ಯನಿರ್ವಹಿಸುವ ಅವಕಾಶ ಇದೆ.

ಈಗಂತೂ ಖ್ಯಾತ ಆಟಗಾರರ ಹಣಕಾಸು ಮತ್ತು ಚಟುವಟಿಕೆಗಳನ್ನು ನಿರ್ವಹಿಸುವ ಸ್ಪೋರ್ಟ್ಸ್ ಮ್ಯಾನೇಜ್‌ಮೆಂಟ್ ಕಂಪೆನಿಗಳು ತಲೆ ಎತ್ತಿವೆ. ಆಟಗಾರರು ಗಳಿಸುವ ಹಣವನ್ನು ನಿಭಾಯಿಸುವ , ವೃತ್ತಿಪರ ಸಲಹೆ ಮತ್ತು ಸಂವಹನ ತರಬೇತಿ ನೀಡುವ ಪರಿಣಿತರು ಇಲ್ಲಿ ಕಾರ್ಯನಿರ್ವಹಿಸುತ್ತಾರೆ. ಸ್ಪರ್ಧಾತ್ಮಕ ಯುಗದಲ್ಲಿ ಸಮೂಹ ಮಾಧ್ಯಮಗಳೊಂದಿಗೆ ಆಟಗಾರರು ಯಾವ ರೀತಿ ಮಾತನಾಡಬೇಕು ಎಂಬುದನ್ನು ಹೇಳಿಕೊಡುವ ಪರಿಣಿತರಿಗೆ ಬಹಳಷ್ಟು ಬೇಡಿಕೆ ಇದೆ. ಆದ್ದರಿಂದ ಮಾಧ್ಯಮ ಸಮನ್ವಯ ಸಂಸ್ಥೆಗಳೂ ತಲೆ ಎತ್ತಿವೆ. ಇದು ಕ್ರಿಕೆಟ್‌ಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲ ಕ್ರೀಡೆಗಳಲ್ಲಿಯೂ ಇದು ಪ್ರಚಲಿತದಲ್ಲಿದೆ. ಸಾಮಾಜಿಕ ಜಾಲತಾಣಗಳನ್ನು ಸಮರ್ಥವಾಗಿ ನಿಭಾಯಿಸುವ ಪರಿಣಿತ ಸಂಸ್ಥೆಗಳೂ ಇವೆ.

ಕ್ರೀಡಾ ಕ್ಷೇತ್ರವು ಏನೆಲ್ಲ ಬದಲಾವಣೆ ಕಂಡಿದ್ದರೂ ಒಂದು ಮೂಲತತ್ವ ಇಂದಿಗೂ ಅನ್ವಯವಾಗುತ್ತದೆ. ಇಲ್ಲಿ ಯಶಸ್ಸಿಗೆ ವಾಮಮಾರ್ಗವಿಲ್ಲ. ಅದರಲ್ಲೂ ಇವತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ಮತ್ತು ಸಾಮಾಜಿಕ ಮಾಧ್ಯಮಗಳು ಚುರುಕಾಗಿರುವ ಸಂದರ್ಭದಲ್ಲಿ ಧ್ವನಿಯನ್ನು ಅಡಗಿಸುವುದು ಸುಲಭವಲ್ಲ. ಆದ್ದರಿಂದ ಸಾಧನೆಯ ದಾಖಲೆಗಳನ್ನು ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಮೇಲೆ ಏರಬೇಕು. ಅದಕ್ಕಾಗಿ ಬೆವರು ಹರಿಸಲೇಬೇಕು. ■



ವಶೀಕರಣ ಸ್ಪೆಷಲಿಸ್ಟ್



ಶ್ರೀಯುತ ಮಂಜುನಾಥ ಗುರೂಜಿಯವರಿಂದ

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ "ಶ್ರೀ ಮಂಜುನಾಥ ಗುರೂಜಿ" ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಬಾಧೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಶ್ರೀ ಮಂಜುನಾಥ ಗುರೂಜಿ

9886999747